ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 27-34.
©*IIMRD*, Mysuru
IIMRD JOURNALS
www.iimrd.com

# ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ವಿವಿಧ ರೂಪಗಳು

**ರಂಗಸ್ವಾಮಿ***

*ಸಂಶೋಧಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

***ಸಾರಾಂಶ: (Abstract)***

*ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆ ಕ್ಷಿಪ್ರವಾಗಿಯೂ, ತೀವ್ರವಾಗಿಯು ನಡೆಯುತ್ತದೆ. ಆದರೆ ಕಾದಂಬರಿಯ ಹರವು ವಿಸ್ತಾರವಾದುದು. ಇಲ್ಲಿ ಪ್ರತಿಭಟನೆ ವ್ಯಾಪಕ ಮತ್ತು ಸಕಾರಣವಾಗಿರುತ್ತದೆ. ಘಟನೆ ಮತ್ತು ಸನ್ನಿವೇಶಗಳಿಂದ ಪ್ರತಿಭಟನೆಯು ಹೆಣೆಯಲ್ಪಟ್ಟಿರುತ್ತದೆ. ಕಥೆ, ಪಾತ್ರ ಮತ್ತು ಸನ್ನಿವೇಶದ ಮೂಲಕ ಇದು ವ್ಯಕ್ತಗೊಳ್ಳುತ್ತದೆ. ಪ್ರತಿಭಟನೆ, ಒಂದು ಪ್ರತಿಕ್ರಿಯೆಯಾಗಿದೆ. ಇದು ಯಾವಾಗಲೂ ಸಿದ್ಧಸೂತ್ರಗಳನ್ನು ಹೊಂದಿರುವುದಿಲ್ಲ. ಅಂದರೆ ಪ್ರತಿಭಟನೆ ಹೀಗೆಯೇ ಇರಬೇಕೆಂದು ಚೌಕಟ್ಟು ರೂಪಿಸುವುದು ಸಾಧ್ಯವಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ತನ್ನ ಸ್ವರೂಪವನ್ನು ಬದಲಿಸಿಕೊಂಡು ಹೋದಾಗ ಪ್ರತಿಭಟನೆ ಸಮಕಾಲೀನವಾಗುತ್ತದೆ. ಇಲ್ಲದೇ ಹೋದಲ್ಲಿ ತನ್ನ ಉದ್ದೇಶ ಈಡೇರಿಕೆಯಾಗದೆ ಪ್ರತಿಭಟನೆ ತೋರಿದರೂ ವ್ಯರ್ಥವಾಗಿ ಬಿಡಬಹುದು. ಪ್ರತಿಭಟನೆಯನ್ನು ಸಾಹಿತ್ಯದಲ್ಲಿ ತರಲು ಕಾದಂಬರಿಕಾರರಿಂದ ಕಾದಂಬರಿಕಾರರಿಗೆ ವ್ಯತಾಸವಿರುತ್ತದೆ. ತಾವು ಕಂಡುಂಡ ಅನುಭವಗಳು ಹಾಗೂ ಚಿಂತನೆಗಳಿಗೆ ಅನುಗುಣವಾಗಿ ಅದು ಕೃತಿಯಲ್ಲಿ ರೂಪು ತಳೆಯುತ್ತದೆ.*

***ಮುಖ್ಯಪದಗಳು: (Keywords)*** *ಕನ್ನಡ ಸಾಹಿತ್ಯ, ಸಾಹಿತ್ಯ ಪ್ರಕಾರ, ಪ್ರತಿಭಟನೆ, ಹೋರಾಟ.*

## ಪೀಠಿಕೆ

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿ, ವ್ಯಕ್ತಿಗಳ ಗುಂಪು, ವ್ಯವಸ್ಥೆ, ಸಂಸ್ಥೆ ಅಥವಾ ಕಾನೂನಿನ ವಿರುದ್ಧ ನಡೆಸುವ ಪ್ರತಿಭಟನೆಯನ್ನು ವಯಕ್ತಿಕ ಪ್ರತಿಭಟನೆ ಎಂದು ಕರೆಯಬಹುದು. ಬದಲಾಗಿ ವ್ಯಕ್ತಿಗಳ ಗುಂಪು ಅಥವಾ ಒಂದು ಸಮುದಾಯ ಪ್ರತಿಭಟನೆಯಲ್ಲಿ ಪಾಲ್ಗೊಂಡರೆ ಅದನ್ನು ಸಾಮೂಹಿಕ ಪ್ರತಿಭಟನೆ ಎನ್ನಬಹುದು. ವೈಯುಕ್ತಿಕ ಪ್ರತಿಭಟನೆಗಿಂತ ಸಾಮೂಹಿಕ ಪ್ರತಿಭಟನೆಯು ಹೆಚ್ಚು ಪರಿಣಾಮಕಾರಿಯಾಗಿದೆ.

ವೈಯುಕ್ತಿಕ ಪ್ರತಿಭಟನೆಯು ಇದು ಆ ವ್ಯಕ್ತಿಯ ಹಿತರಕ್ಷಣೆ ಅಥವಾ ಪರಿಸ್ಥಿತಿಯ ಸುಧಾರಣೆಯ ಆಶಯವನ್ನು ಹೊಂದಿರುತ್ತದೆ. ಚೋಮನ ದುಡಿಯಲ್ಲಿ ಒಡೆಯ ಸಂಕಪ್ಪಯ್ಯ ಚೋಮನಿಗೆ ಭೂಮಿಯನ್ನು ಗೇಣಿಗೆ ನೀಡಲು ಒಪ್ಪದಿದ್ದಾಗ ನಡೆಸುವ ಚೋಮನ ಪ್ರತಿಭಟನೆ ವಯಕ್ತಿಕ ಪ್ರತಿಭಟನೆಯಾಗಿದೆ. ಸಾರಾಯಿ ಕುಡಿದು ಒಂದೇ ಸಮನೆ ದುಡಿಯನ್ನು ನುಡಿಸುವುದು ಅವನ ಪ್ರತಿಭಟನೆಯ ಸ್ವರೂಪವಾಗಿದೆ. ಪ್ರತಿಭಟನೆ ನೇರ ಹೋರಾಟವೇ ಆಗಿರಬೇಕಿಲ್ಲ. ದುಡಿಯು ಚೋಮನ ಪ್ರತಿಭಟನೆಯ ಸಾಧನವಾಗಿದೆ. ತಾನು ನೇಗಿಲು

*Please cite this article as: ರಂಗಸ್ವಾಮಿ.* (2023). ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ವಿವಿಧ ರೂಪಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು.ಸಂ. 27–34.*

ಹಿಡಿಯದಂತೆ ಮಾಡಿದ ವ್ಯವಸ್ಥೆಯ ವಿರುದ್ಧದ ಆಕ್ರೋಶವನ್ನು ಚೋಮ ದುಡಿಯನ್ನು ನುಡಿಸುವುದರಲ್ಲಿ ಹೊರಹಾಕುತ್ತಾನೆ. ಅಲ್ಲದೆ ತಾನು ಸಾಕಿದ ಎತ್ತುಗಳಿಂದ ತನ್ನ ಭೂಮಿಯನ್ನು ಉಳಲಾಗದಿದ್ದರೆ ಒಡೆಯನ ಭೂಮಿಯನ್ನೂ ಉಳಲಾಗದು ಎನ್ನುವ ತೀರ್ಮಾನಕ್ಕೆ ಬಂದ ಚೋಮ ಆ ಎತ್ತುಗಳನ್ನು ತನಗೆ ದೊರಕಿದ ಕಾಡಿಗೆ ಅಟ್ಟಿ ಬರುತ್ತಾನೆ.

ಚಂದ್ರಗಿರಿಯ ತೀರದಲ್ಲಿ ಕಾದಂಬರಿಯ ನಾಯಕಿ ನಾದಿರಾ ತನಗೆ ತಲಾಖ್ ನೀಡಿದ ಮೇಲೆ ವಯಸ್ಸಾದ ವ್ಯಕ್ತಿಗೆ ಎರಡನೇ ಮದುವೆಯಾಗಲು ತಂದೆ ಮಹಮದ್ ಖಾನ್ ಪ್ರಸ್ತಾಪಿಸುತ್ತಾನೆ. ತನಗೆ ಅರಿವಿಲ್ಲದಂತೆ ಗಂಡನಿಂದ ದೂರ ಮಾಡಿ, ತಲಾಖ್ ಕೊಡಿಸಿ ಈಗ ತನ್ನ ಅಸ್ಥಿತ್ವವನ್ನೇ ಅಣಕಿಸುವಂತೆ ಎರಡನೇ ಮದುವೆ ಮಾಡುವ ತಂದೆಯ ನಿರ್ಧಾರದ ವಿರುದ್ಧ, "ನೀವು ನನಗೆ ಒಂದು ಮದುವೆ ಮಾಡಿದ್ದು ಸಾಕು! ನೀವೇನಾದರೂ ನನಗೆ ಇನ್ನೊಮ್ಮೆ ಮದುವೆ ಮಾಡಲು ಪ್ರಯತ್ನಿಸಿದರೆ ನಾನು ಚಂದ್ರಗಿರಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ!" ಎಂದು ತನ್ನ ಮೇಲಾಗುವ ದೌರ್ಜನ್ಯದ ವಿರುದ್ಧ ನಾದಿರಾ ಪ್ರತಿಭಟಿಸುತ್ತಾಳೆ. ಇವು ವಯಕ್ತಿಕ ಹಾನಿಯ ಅಥವಾ ತಾರತಮ್ಯದ ವಿರುದ್ಧ, ತಾರತಮ್ಯಕ್ಕೆ ಗುರಿಯಾದ ವ್ಯಕ್ತಿಗಳು ಮಾತ್ರ ತೋರುವ ಪ್ರತಿಭಟನೆ ವೈಯಕ್ತಿಕ ಪ್ರತಿಭಟನೆಯಾಗಿದೆ.

ವೈಯಕ್ತಿಕ ಪ್ರತಿಭಟನೆಗೆ ವಿರುದ್ಧವಾದುದು ಸಾಮೂಹಿಕ ಪ್ರತಿಭಟನೆಯಾಗಿದೆ. ಚಿರಸ್ಮರಣೆಯಲ್ಲಿ ಬರುವ ಕಯ್ಯೂರಿನ ರೈತ ಹೋರಾಟವು ಸಾಮೂಹಿಕ ಪ್ರತಿಭಟನೆಗೆ ಒಳ್ಳೆಯ ಉದಾಹರಣೆಯಾಗಿದೆ. ಶಬರಿ ಕಾದಂಬರಿಯಲ್ಲಿ ಸೂರ್ಯ ಮತ್ತು ನವಾಬರು ಬುಡಕಟ್ಟು ಹಟ್ಟಿಯ ಜನರಿಗೆ ಶಿಕ್ಷಣ ಕೊಟ್ಟು ತಮಗೆ ಸಲ್ಲಬೇಕಾದ ತೋಪಿನ ಭೂಮಿಯನ್ನು ಉಳಿಸಿಕೊಳ್ಳಲು ಒಡೆಯ ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾಗುತ್ತಾರೆ.

ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ವೈಯುಕ್ತಿಕ ಪ್ರತಿಭಟನೆಯು ಹೆಚ್ಚಾಗಿ ಸಾಮೂಹಿಕ ಪ್ರತಿಭಟನೆಯು ವಿರಳವಾಗಿ ಕಂಡುಬರುತ್ತದೆ. ವಚನ ಚಳುವಳಿಯಲ್ಲಿಯೂ ಒಟ್ಟು ಪ್ರತಿಭಟನೆಯ ದನಿ ಸಾಮೂಹಿಕವಾದರೂ ವಯಕ್ತಿಕ ನೆಲೆಯಲ್ಲಿಯೇ ಪ್ರತಿಭಟನೆ ವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ. ವಶಹತುಶಾಹಿ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಸಮಾಜವು ಸಾಮೂಹಿಕ ಪ್ರತಿಭಟನೆಯನ್ನು ಕಂಡಿತಾದರೂ ಅದರ ಸಾಹಿತ್ಯಿಕ ರೂಪ ಪ್ರಗತಿ ಶೀಲದಲ್ಲಾಯಿತು. ಪ್ರಗತಿಶೀಲರು ತಮ್ಮ ಸಾಹಿತ್ಯವನ್ನು ಸಮಾಜದ ಬದಲಾವಣೆಗೆ ಮೀಸಲಾಗಿಟ್ಟರು. ಇವರ ಸಾಹಿತ್ಯ ಪ್ರಕಾರಗಳಲ್ಲಿ ಸಾಮೂಹಿಕ ಪ್ರತಿಭಟನೆಯು ಹಲವು ರೂಪದಲ್ಲಿ ಕಾಣಿಸಿಕೊಂಡಿತು. ದಲಿತ–ಬಂಡಾಯದ ಕಾಲಘಟ್ಟದಲ್ಲಿ ಪ್ರತಿಭಟನಾ ಸಾಹಿತ್ಯವೆಂಬುದು ಕಾಣಿಸಿಕೊಂಡು ಸಮೂಹದ ಹಾಗೂ ವೈಯಕ್ತಿಕ ನೆಲೆಯಲ್ಲಿ ಪ್ರತಿಭಟನೆಯು ಶಕ್ತಿ ಶಾಲಿಯಾಯಿತು.

ಅರವಿಂದ ಮಾಲಗತ್ತಿಯವರ ಕಾರ್ಯ ಕಾದಂಬರಿಯು ಶೀತಲ ಪ್ರತಿಭಟನೆಗೆ ಒಂದು ಉತ್ತಮ ಉದಾಹರಣೆಯಾಗಿದೆ. ಬಂಗಾರೆವ್ವನ ಮೂರು ದಿನದ ಕಾರ್ಯವನ್ನು ನೆರವೇರಿಸಲು ಹೊರಟ ಮಚಗಾರ ಜನಾಂಗದ ಕ್ರಿಯೆಯೊಂದನ್ನು ಕಾದಂಬರಿ ವಸ್ತುವನ್ನಾಗಿ ಹೊಂದಿದೆ. ಕಾದಂಬರಿಯಲ್ಲಿ ನಾಟಕೀಯ ಬೆಳವಣಿಗೆಗಳು ನಡೆಯುತ್ತವೆ." ಬಂಗಾರೆವ್ವಳ ಸಾವು ಒಂದು ನೆಪವಷ್ಟೇ. ಸಾವಿನ ನಂತರದ ಜನಾಂಗವೊಂದರ ಸ್ಥಿತಿಯೂ ಇಲ್ಲಿ ಮುಖ್ಯವಾಗುತ್ತದೆ. ಈ ಕಾರಣದಿಂದಲೇ ಅನೇಕ ಘಟನೆಗಳು ನಡೆಯುತ್ತವೆ. ಅದರೊಂದಿಗೆ ಅನೇಕ ಪಾತ್ರಗಳು ಆಯಾ ಪಾತ್ರಗಳ ಹಿಂದಿನ ವಿವರಗಳು ಕಾದಂಬರಿಯಲ್ಲಿ

ಬಹುಮುಖ್ಯ ವ್ಯಕ್ತಿತ್ವವನ್ನು ಹೊಂದಿದೆ. ವರಗ ದಶರಥನ ಮೀಸೆ ಬೋಳಿಸಿದ ಪ್ರಸಂಗ, ಅದನ್ನು ಬೆಳೆಸಿಕೊಂಡ ಪ್ರಸಂಗ, ಜಂಗಮ ಬುಡಾಳಯ್ಯನ ಬಗೆಗೆ ಇರುವಟೀಕೆ, ಪದ್ಮಾವತಿ ಮತ್ತು ಮಲ್ಲಪ್ಪ ಓಡಿ ಹೋಗುವ ಘಟನೆ ಇತ್ಯಾದಿ ಘಟನೆಗಳು ತಮ್ಮದೇ ರೀತಿಯ ತಾರ್ಕಿಕ ಸಂಬಂಧವನ್ನು ಹೊಂದಿದ್ದು ಶೀತಲ ಪ್ರತಿಭಟನೆಯ ಅರ್ಥವನ್ನು ಧ್ವನಿ ಪೂರ್ಣವಾಗಿ ವ್ಯಕ್ತಪಡಿಸುತ್ತವೆ.

ಹಲವು ರೂಪಗಳಲ್ಲಿ ಪ್ರತಿಭಟನೆಯು ನೇರವಾಗಿ ವ್ಯಕ್ತವಾಗುವುದನ್ನು ಬಹಿರಂಗ ಪ್ರತಿಭಟನೆ ಎನ್ನಬಹುದು. ಇದು ಧರಣಿ, ಸತ್ಯಾಗ್ರಹ, ಘೋಷಣೆ, ವಾಗ್ವಾದ ಮುಂತಾದ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಬರಗೂರರ ಸೂರ್ಯ ಕಾದಂಬರಿಯಲ್ಲಿ ಜಮೀನ್ದಾರನ ದೌರ್ಜನ್ಯವನ್ನು ಊರ ಜನರ ಮುಂದೆಯೇ ಸೀತಕ್ಕ ವಿರೋಧಿಸುವುದು, ಉಕ್ಕಿನ ಕೋಟೆ ಕಾದಂಬರಿಯಲ್ಲಿ ಕರಿಯಣ್ಣ ಒಡೆಯನ ವಿರುದ್ಧ ತಿರುಗಿ ಬೀಳುವುದು, ಶಬರಿಯಲ್ಲಿ ಸೂರ್ಯ, ನವಾಬ, ಶಬರಿ ಮತ್ತು ಹಟ್ಟಿಯ ಜನರು ಒಡೆಯ ಮತ್ತು ರಾಜಕೀಯ ಹಿತಾಸಕ್ತಿಗಳ ವಿರುದ್ಧ ಹೋರಾಡುವುದು, ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿಯ ತೀರದಲ್ಲಿ ಮತ್ತು ಫಕೀರ್ ಮುಹಮ್ಮದ್ ಕಟ್ಪಾಡಿಯವರ ಸರಕುಗಳು ಕಾದಂಬರಿಯಲ್ಲಿ ಧಾರ್ಮಿಕ ಶೋಷಣೆಗಳನ್ನು ವಿರೋಧಿಸುವುದು ಬಹಿರಂಗ ಪ್ರತಿಭಟನೆಯ ರೂಪಗಳಾಗಿವೆ. ಬಹಿರಂಗ ಪ್ರತಿಭಟನೆಗೆ ತನ್ನ ವಿರೋಧಿಯ ಅರಿವಿರುತ್ತದೆ. ತಮ್ಮ ಮೇಲಾಗುವ ಶೋಷಣೆಯ ಸ್ವರೂಪವನ್ನು ನೇರವಾಗಿ ವಿರೋಧಿಗಳಿಗೆ ಮನದಟು ್ಮಾಡಿ ವ್ಯವಸ್ಥೆಯ ಬದಲಾವಣೆಗೆ ನಡೆಸುವ ವಿರೋಧ ಇಂತಹ ಪ್ರತಿಭಟನೆಯಲ್ಲಿ ನೋಡಬಹುದಾಗಿದೆ.

**ಪ್ರತಿಭಟನೆಯ ಕ್ರಿಯಾತ್ಮಕ ವಿನ್ಯಾಸ**

ಸೈದ್ಧಾಂತಿಕ ವಿಚಾರ ಏನೇ ಇರಲಿ ಪ್ರತಿಭಟನೆ ಎಂದರೆ ಅದು ಕ್ರಿಯಾತ್ಮಕ ರೂಪವೇ ಸರಿ. ಅನ್ಯಯಕ್ಕೊಳಗಾದ ಜನರ ಭೌತಿಕ ಉಪಸ್ಥಿತಿಯಿಂದ ಇದಕ್ಕೊಂದು ಬೆಲೆ ಬರುತ್ತದೆ. ಪ್ರತಿಭಟನೆ ಹಲವು ರೂಪಗಳಲ್ಲಿ ವ್ಯಕ್ತವಾಗುತ್ತದೆ. ಅದು ಹಲವು ಅಂಶಗಳನ್ನು ಅವಲಂಬಿಸಿ ಜರುಗುವಂತಾಹದ್ದು. ಇಂತಹದ್ದಕ್ಕೆ ಇಂತಹದ್ದೇ ಪ್ರತಿಭಟನೆ ಎಂದು ಯಾವಾಗಲೂ ಇರುವುದಿಲ್ಲ. ಸನ್ನಿವೇಶ ಯಾವುದಕ್ಕೆ ಪೂರಕವಾಗಿರುತ್ತದೋ ಅಂತಹ ಸ್ವರೂಪದಲ್ಲಿ ಅದು ಪ್ರಕಟಗೊಳ್ಳುತ್ತದೆ. ಅಧ್ಯಯನಕ್ಕೆ ಒಳಪಡಿಸಿದ ಕಾದಂಬರಿಗಳಲ್ಲಿ ಕಂಡುಬರುವ ವಿವಿಧ ರೀತಿಯ ಪ್ರತಿಭಟನೆಗಳನ್ನು ಮುಂದೆ ನೋಡಲಾಗಿದೆ.

**ಸಮಾವೇಶ (ರ‍್ಯಾಲಿ)**

ಅನುಕೂಲವಾದ ಒಂದು ಸ್ಥಳದಲ್ಲಿ ಸಂಬಂಧಿಸಿದ ಎಲ್ಲರೂ ಸೇರಿ ಸಮಸ್ಯೆಯ ಅಥವಾ ದೌರ್ಜನ್ಯದ ಬಗ್ಗೆ ವಿಚಾರ ವಿನಿಮಯ ಮಾಡುವ ಮೂಲಕ ಸಂಬಂಧಿಸಿದವರಿಗೆ ಸೂಚನೆ ಅಥವಾ ಎಚ್ಚರಿಕೆ ನೀಡುವ ಕಾರ್ಯಕ್ರಮ ಸಮಾವೇಶ ಎನಿಸಿಕೊಳ್ಳುತ್ತದೆ. ಭಾಷಣ, ಹಾಡು, ಜಾಗೃತಿಗೀತೆ ಮುಂತಾದ ಚಟುವಟಿಕೆಗಳು ಸಮಾವೇಶದಲ್ಲಿ ನಡೆಯುತ್ತವೆ. ಇಲ್ಲಿ ಸೇರುವ ಎಲ್ಲರೂ ಸಮಾನ ದುಃಖಿಗಳಾದ್ದರಿಂದ ಹಾಗೂ ಸಮಾವೇಶಗಳು ದೊಡ್ಡ ಪ್ರಮಾಣದಲ್ಲಿ ನಡೆಯುವುದರಿಂದ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ.

ಸಮಾವೇಶಕ್ಕೆ ಹಲವು ದಿನಗಳ ಸಿದ್ಧತೆ ಬೇಕಾಗುತ್ತದೆ. ಕಾರ್ಯಸೂಚಿಗಳ ಚರ್ಚೆಯಾಗ ಬೇಕಾಗುತ್ತದೆ. ಸಮಾವೇಶವು ಅಲ್ಲಿನ ಕಾನೂನುಗಳನ್ನು ಗಮನದಲ್ಲಿಟ್ಟುಕೊಂಡು ಜರುಗ ಬೇಕಾಗುತ್ತದೆ.

ಜಾತಿ ತಾರತಮ್ಯ, ಮೀಸಲಾತಿ, ವರ್ಗತಾರತಮ್ಯ ಮುಂತಾದವುಗಳ ವಿರುದ್ಧದ ಹೋರಾಟಕ್ಕೆ ಸಮಾವೇಶಗಳು ಜರುಗುತ್ತವೆ. ಪಟ್ಟಭದ್ರ ಹಿತಾಸಕ್ತಿಗಳು ಸಮಾವೇಶದ ಯಶಸ್ಸಿನಿಂದ ಬೆದರಿ ಧಮನಕಾರಿ ಕ್ರಮಗಳನ್ನು ಅನುಸರಿಸುವುದೂ ಉಂಟು ಆಗ ಶಾಂತಿಯುತ ಸಮಾವೇಶಗಳು ವಿನಾಶಕಾರಿ ಹಂತ ತಲುಪುವ ಅಪಾಯವೂ ಇದೆ. ಭೂ ಸುಧಾರಣೆ ಪದ್ಧತಿ ಜಾರಿಯಾಗುವ ಮೊದಲು ಬಹುಸಂಖ್ಯಾತ ಶ್ರಮಿಕ ವರ್ಗದವರು ಅಲ್ಪಸಂಖ್ಯಾತ ಜಮೀನ್ದಾರರ ವಿರುದ್ಧ ಇಂತಹ ಸಮಾವೇಶಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸುವ ಕಾರ್ಯ ಮಾಡಿದರು. ಇದು ಸಹಜವಾಗಿ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಯಿತು. ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಹಲವಾರು ರೈತ ಸಮಾವೇಶಗಳು ಜರುಗಿದವು. ಕೈಯೂರಿನ ರೈತ ಹೋರಾಟದ ಕಥೆಯನ್ನು ಹೊಂದಿರುವ ಚಿರಸ್ಮರಣೆ ಕಾದಂಬರಿಯು ಇಂತಹ ಪ್ರತಿಭಟನೆಯನ್ನು ಆಧರಿಸಿ ರಚನೆಯಾಗಿದೆ ದಲಿತ–ಬಂಡಾಯ ಕಾಲದಲ್ಲಿ ವರ್ಗ, ಜಾತಿ ಮತ್ತು ಇನ್ನಿತರ ಸಾಮಾಜಿಕ ಶೋಷಣೆಯ ವಿರುದ್ಧ ಸಮಾವೇಶಗಳು ನಡೆಯತೊಡಗಿದವು. ಇದಕ್ಕೆ ಬೆಂಬಲವಾಗಿ ಹಲವು ಸಂಘಟನೆಗಳು ಸ್ಥಾಪಿತವಾದವು. ಇವುಗಳು ಜನರನ್ನು ಒಗ್ಗೂಡಿಸಿ ಅನ್ಯಾಯದ ವಿರುದ್ಧ ಹೋರಾಡುವ ಅಸ್ತ್ರವನ್ನಾಗಿ ಮಾಡಿಕೊಂಡರು.

**ಮೆರವಣಿಗೆ (ಮಾರ್ಚ್)**

ಮೆರವಣಿಗೆ ಎಂಬುದು ಪ್ರತಿಭಟನೆಯ ಮತ್ತೊಂದು ರೂಪ. ಮೆರವಣಿಗೆ ಎಂಬುದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂದೇಶ ಹೊತ್ತು ಹೋಗುವುದಾಗಿದೆ. ಮೆರವಣಿಗೆಯು ಬಾವುಟ, ಭಿತ್ತಿಪತ್ರ, ವಿವಿಧ ಸಂದೇಶ ಹೊತ್ತು ನಡೆಯಲಾಗುತ್ತದೆ. ನೊಂದ ಜನರು ಎದುರು ಪಕ್ಷದವರಿಗೆ ನೀಡಬೇಕಾದ ಸಂದೇಶವನ್ನು ಸಾರುತ್ತಾ ನಡೆಯುವುದರಿಂದ ತಮ್ಮ ಅಸಮಧಾನವನ್ನು ತಲುಪಿಸಲು ಸಹಾಯವಾಗುತ್ತದೆ. ದೇವನೂರು ಮಹದೇವ ಅವರ ಕುಸುಮಬಾಲೆ ಕಾದಂಬರಿಯಲ್ಲಿ ದಲಿತ ಸಂಘಟನೆಗಳು ಸೇರಿ ಜೀತಮುಕ್ತ ಸಮಾಜ ನಿರ್ಮಾಣಕ್ಕೆ ಮೆರವಣಿಗೆ ಹೊರಡುವುದು ಇದರ ಕ್ರಿಯಾತ್ಮಕ ರೂಪವಾಗಿದೆ.

**ಜಾಗೃತಿ (ವಿಜಿಲ್)**

ಅಜ್ಞಾನದ ಕಾರಣವಾಗಿ ಶೋಷಣೆಗೆ ಒಳಗಾಗಿರುವ ಜನರಿಗೆ ಸೂಕ್ತ ತಿಳುವಳಿಕೆ ಮತ್ತು ಮಾರ್ಗದರ್ಶನ ನೀಡುವ ಮೂಲಕ ಜಾಗೃತಿ ಕಾರ್ಯವು ನಡೆಯುತ್ತದೆ. ಅನ್ಯಾಯದ ಸ್ವರೂಪ, ದೊರೆಯಬೇಕಾದ ಸೌಲಭ್ಯಗಳು, ದಕ್ಕಬೇಕಾದ ಹಕ್ಕುಗಳು ಮುಂತಾದವುಗಳ ಮೂಲಕ ಎಚ್ಚರಿಸುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಬಹುದು. ಇಲ್ಲಿ ಶೋಷಣೆಯನ್ನು ಅನುಭವಿಸುವ ವ್ಯಕ್ತಿಯಷ್ಟೇ ಅಲ್ಲದೆ, ಶೋಷಣೆಯನ್ನು ಗಮನಿಸುವ ವ್ಯಕ್ತಿಯೂ ಸಹ ಜಾಗೃತಿ ಮೂಡಿಸಬಹುದು.

**ಕ್ರಾಂತಿ (ರಿಯೋಟ್)**

ಅತ್ಯಂತ ಧಮನಕಾರಿ ಪ್ರತಿಭಟನೆಯ ವಿಧಾನವೆಂದರೆ ಅದು ಕ್ರಾಂತಿ. ಶೋಷಣೆಯು ಉಚ್ಛ್ರಾಯ ಸ್ಥಿತಿ ತಲುಪಿದಾಗ ಕ್ರಾಂತಿಯನ್ನು ಆಹ್ವಾನಿಸುತ್ತದೆ. ಇದು ರಕ್ತರಹಿತ ಕ್ರಾಂತಿಯಾಗಿರಬಹುದು ಅಥವಾ ರಕ್ತ ಸಹಿತ ಕ್ರಾಂತಿಯಾಗಿರಬಹುದು. ಇದನ್ನು ಶೀಘ್ರವಾಗಿ ನಿಯಂತ್ರಿಸದಿದ್ದರೆ ಅಪಾರ ಪ್ರಾಣ ಹಾಗೂ ಆಸ್ತಿಹಾನಿ ಸಂಭವಿಸಬಹುದು.

**ನಾಗರಿಕ ಅಸಹಕಾರ**

ಕಾನೂನುಗಳು ಬಹು ಜನರ ಏಳಿಗೆಗೆ ರೂಪಿತವಾಗಬೇಕು ಮತ್ತು ಸೂಕ್ತ ಕಾಲದಲ್ಲಿ ಜಾರಿಗೊಳ್ಳಬೇಕು. ಹೊಸ ಕಾನೂನುಗಳ ಜಾರಿಯಿಂದಲೋ ಅಥವಾ ಈಗಾಗಲೇ ಇರುವ ಕಾನೂನುಗಳ ಪುನರ್ ರಚನೆಯಿಂದಲೋ ಸಮಾಜದ ಸ್ಥಿತಿಗತಿ ಸುಧಾರಣೆಯಾಗಬೇಕು. ಕಠಿಣ ಕಾನೂನುಗಳು ಸರಳಗೊಳ್ಳಬೇಕು. ಅನುಸರಿಸಲು ನಿಲುಕುವಂತಿರಬೇಕು. ಇಲ್ಲವಾದರೆ ಅವು ಜನರಿಂದ ತಿರಸ್ಕರಿಸಲ್ಪಡುತ್ತವೆ. ಸ್ವಾರ್ಥ, ದುರುದ್ದೇಶ, ಸ್ವಜನ ಪಕ್ಷಪಾತಗಳು ಧಮನಕಾರಿ ಕಾನೂನುಗಳು ಜಾರಿಯಾಗಲು ಕಾರಣಗಳಾಗುತ್ತವೆ. ಕಾನೂನು ರಚನೆಯಲ್ಲಿ ಭಾಗಿಯಾಗದ ಜನತೆಯ ಆಶೋತ್ತರಗಳನ್ನು ಈ ಕಾನೂನುಗಳು ಲಕ್ಷಿಸುವುದಿಲ್ಲ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಡೆದ ಕಾನೂನು ಭಂಗ ಚಳುವಳಿಯು ಇಂತಹ ಧಮನಕಾರಿ ಕಾನೂನುಗಳ ವಿರುದ್ಧ ಜನತೆಯ ಪ್ರತಿಕ್ರಿಯೆಯನ್ನು ದಾಖಲಿಸುತ್ತದೆ.

ನಾಗರಿಕ ಅಸಹಕಾರವು ಹಲವು ಸ್ವರೂಪದಲ್ಲಿ ವ್ಯಕ್ತವಾಗುತ್ತದೆ. ಮುಖ್ಯವಾಗಿ ವ್ಯಾಪಾರ, ವಹಿವಾಟುಗಳನ್ನು ನಿಲ್ಲಿಸುವುದು, ದುಡಿಯುವ ವರ್ಗದ ಕಾರ್ಮಿಕರು ತಮ್ಮ ಕೆಲಸ ಸ್ಥಗಿತಗೊಳಿಸುವುದು ಹಾಗೂ ಜಾರಿಗೊಳ್ಳುವ ಮಾರಕ ಕಾನೂನುಗಳನ್ನು ಮುರಿಯುವುದು ಇವುಗಳಲ್ಲಿ ಮುಖ್ಯವಾದವು. ತಮ್ಮ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಕಾನೂನನ್ನು ಪಾಲಿಸದಿರುವುದು ಕಾನೂನು ಅಸಹಕಾರವಾಗುತ್ತದೆ.

**ನಾಟಕ ಪ್ರದರ್ಶನ (ಡ್ರಾಮಾಟರ್ಜಿಕಲ್ ಡೆಮಾನ್ಸ್ಟ್ರೇಷನ್)**

ಕೇಳುವುದಕ್ಕಿಂತ ನೋಡುವುದು ಹೆಚ್ಚು ಪರಿಣಾಮಕಾರಿ ಆದುದರಿಂದ ಜನರಿಗೆ ಸುಲಭವಾಗಿ ತಲುಪಿಸ ಬೇಕೆಂದಿರುವ ವಿಷಯವನ್ನು ನಾಟಕವನ್ನಾಗಿ ರಚಿಸಿ ಪ್ರದರ್ಶನ ಮಾಡುವುದು ಇಂತಹ ಪ್ರತಿಭಟನೆಯಾಗುತ್ತದೆ. ಇದರಿಂದ ಶೋಷಿತರು ಜಾಗೃತರಾಗುವುದರ ಜೊತೆಗೆ ಶೋಷಕರಿಗೂ ಒಂದು ಎಚ್ಚರಿಕೆ ರವಾನಿಸ ಬಹುದಾಗಿದೆ.

**ಮಾಹಿತಿ ಹಂಚಿಕೆ**

ವೃತ್ತಪತ್ರಿಕೆ, ಟಿ.ವಿ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ಅಗತ್ಯವಾದ ಮಾಹಿತಿಯನ್ನು ಹಂಚಿ ಜನರಲ್ಲಿ ಜಾಗೃತಿ ಮೂಡಿಸುವುದು.

**ಮೊಕದ್ದಮೆ ಹೂಡುವುದು (ಲಾ ಸೂಟ್)**

ಕಾನೂನು ಬದ್ಧ ಹೋರಾಟಕ್ಕೆ ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ನ್ಯಾಯಾಲಯದಲ್ಲಿ ದಾವೆ ಹೂಡಿ ಹೋರಾಟವನ್ನು ನಡೆಸುವ ವಿಧಾನವಾಗಿದೆ. ಮೊಕದ್ದಮೆಯು ಒಂದು ಕಾನೂನಾತ್ಮಕ ಹೋರಾಟ ಮತ್ತು ನ್ಯಾಯಯುತ ಹೋರಾಟವಾಗಿದೆ. ಇದು ದೀರ್ಘಕಾಲೀನ ಹೋರಾಟವಾಗಿದ್ದರೂ ಶಾಶ್ವತ ಪರಿಹಾರ ಒದಗಿಸಿಕೊಡುವ ರಕ್ತರಹಿತ ವಿಧಾನವಾಗಿದೆ.

**ಪ್ರಾರ್ಥನೆ ನಡಿಗೆ (ಪ್ರೇಯರ್ ವಾಕ್)**

ಪ್ರಾರ್ಥನಾ ನಡಿಗೆಯು ಮೆರವಣಿಗೆಗಿಂತ ಭಿನ್ನವಾಗಿರುತ್ತದೆ. ಮೆರವಣಿಗೆಯಲ್ಲಿ ವಿರೋಧಿ ಘೋಷಣೆಗಳು, ಜಯಕಾರಗಳು, ಶೋಷಣೆಯನ್ನು ವಿರೋಧಿಸುವ ಬರಹಗಳ ಕಾರ್ಡುಗಳನ್ನು ಒಳಗೊಂಡಿರುತ್ತದೆ. ಪ್ರಾರ್ಥನಾ ನಡಿಗೆಯು ಎದುರು ಪಕ್ಷದವರಿಗೆ ನೈತಿಕ ಹೊಣೆಗಾರಿಕೆಯನ್ನು ಹೆಚ್ಚಿಸುವ

ವಿಧಾನವಾಗಿರುತ್ತದೆ. ಇದು ಯಾವುದೇ ವಿರೋಧಿ ಘೋಷಣೆಗಳಿಲ್ಲದೆ ತಮ್ಮ ಹಕ್ಕು ಮತ್ತು ಕರ್ತವ್ಯಕ್ಕಾಗಿ ಹಾಗೂ ದೌರ್ಜನ್ಯವನ್ನು ಕೊನೆಗಾಣಿಸುವುದಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗುವುದಾಗಿದೆ. ಪ್ರಾರ್ಥನಾ ಮೆರವಣಿಗೆಯು ಹೆಚ್ಚಾಗಿ ಧಾರ್ಮಿಕ ವಿಷಯಗಳ ಸುಧಾರಣೆಗೆ ಒತ್ತಾಯಿಸಲು ಬಳಕೆಯಾಗುತ್ತದೆ. ಇತ್ತೀಚೆಗೆ ಶಬರಿಮಲೆ ದೇವಸ್ಥಾನದ ಪ್ರವೇಶಕ್ಕೆ ಸಂಬಂಧಿಸಿದಂತೆ ಹಲವು ಕಡೆಗಳಲ್ಲಿ ಪ್ರಾರ್ಥನಾ ನಡಿಗೆಗಳು ಜರುಗಿದವು.

ಧಾರ್ಮಿಕ ಆಚರಣೆಗಳಲ್ಲಿ ಕಾಲದ ಹೊಡೆತಕ್ಕೆ ಸಿಕ್ಕಿ ಹಲವು ಬದಲಾವಣೆಗಳು ನಡೆಯಬಹುದು. ಸಂಪ್ರದಾಯ ಪಾಲಿಸುವ ಜನರು ಈ ಬದಲಾವಣೆಗಳನ್ನು ವಿರೋಧಿಸುವುದು ಸಹಜ. ಕ್ರಾಂತಿ ಹೋರಾಟ ಮುಷ್ಕರ ಮುಂತಾದವುಗಳು ಇಂತಹ ಸಂಧರ್ಭಗಳಲ್ಲಿ ಅರ್ಥಹೀನವಾಗುತ್ತವೆ ಮತ್ತು ಧರ್ಮ ವಿರೋಧಿಯಾಗುತ್ತವೆ. ಆದುದರಿಂದ ಅಪೇಕ್ಷಿತ ಬದಲಾವಣೆ ತರಲು ಅಥವಾ ಅನಪೇಕ್ಷಿತ ಬದಲಾವಣೆಯನ್ನು ವಿರೋಧಿಸಲು ಪ್ರಾರ್ಥನಾ ನಡಿಗೆಯು ಉತ್ತಮ ವಿಧಾನವಾಗಿದೆ.

**ಘರ್ಷಣೆ–ಸಂಘರ್ಷ**

ಘರ್ಷಣೆಯು ಪ್ರತಿಭಟನೆಯ ಕ್ರಾಂತಿಕಾರಕ ರೂಪವಾಗಿದೆ. ಅನ್ಯಾಯ ಅಥವಾ ದೌರ್ಜನ್ಯದ ಪರಮಾವಧಿಯು ಜನರಲ್ಲಿ ಆಕ್ರೋಷಕ್ಕೆ ತುತ್ತಾಗಿ ಅದು ಘರ್ಷಣೆಯ ಕಡೆಗೆ ತಿರುಗುತ್ತದೆ. ಪ್ರತಿಭಟನೆಯ ಎಲ್ಲಾ ಸಾಧ್ಯತೆಗಳು ವಿಫಲವಾದಾಗ ಘರ್ಷಣೆ ಉಂಟಾಗುತ್ತದೆ.

ಕುಂ.ವೀ. ಅವರ ಕೆಂಡದ ಮಳೆ ಕಾದಂಬರಿಯು ಸಂಘರ್ಷದ ಪ್ರತಿಭಟನೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ತನ್ನದೇನೂ ತಪ್ಪಿಲ್ಲದಿದ್ದರೂ ಊರಿನ ಗೌಡನ ಕೆಂಗಣ್ಣಿಗೆ ಗುರಿಯಾದ ಬಾಷಾ ಪಡಬಾರದ ಪಾಡು ಅವನನ್ನು ವ್ಯಗ್ರನನ್ನಾಗಿಸುತ್ತದೆ. ತನ್ನ ಪಾಡಿಗೆತಾನು ಇದ್ದರೂ ದೂಪದ ಹಳ್ಳಿಯ ಜಮೀನುದಾರನ ಮಸಲತ್ತಿನಿಂದ ತಂದೆಯ ಹೆಣ ಭೂಮಿಯಿಂದ ಹೊರಬಂದು ಬೀಳುತ್ತದೆ. ಇದು ಬಾಷಾನಲ್ಲಿ ಕಿಚ್ಚು ಹಚ್ಚುತ್ತದೆ. ತಂದೆಯ ಹೆಣವನ್ನು ಶಿವನಂಜಪ್ಪನ ದೇವರ ಮನೆಯಲ್ಲಿ ತಂದಿರಿಸಿ ನೇರ ಸಂಘರ್ಷಕ್ಕೆ ಇಳಿದು ಬಿಡುತ್ತಾನೆ. ತನ್ನ ವಯಕ್ತಿಕ ಹಿತಾಸಕ್ತಿಗೆ ಊರಿನ ವಿದ್ಯಮಾನಗಳನ್ನು ಬಳಸಿಕೊಳ್ಳುವ ಶಿವನಂಜಪ್ಪ ಮುಗ್ಧರ ಬದುಕಿನಲ್ಲಿ ಆಟವಾಡುತ್ತಾನೆ. ಅನ್ಯಾಯತುದಿ ಮುಟ್ಟಿದಾಗ ಸಂಘರ್ಷ ತಲೆದೋರುತ್ತದೆ. ಸಂಘರ್ಷವು ಸಾಮಾನ್ಯವಾಗಿ ವಿನಾಶಕಾರಿಯಾಗಿರುತ್ತದೆ. ಬಾಷಾನ ತಂದೆಯ ಹೆಣ ಶಿವನಂಜಪ್ಪನ ದೇವರ ಮನೆಗೆ ಬಂದಾಗ ಅವನ ಕುಟುಂಬ ಬೀದಿ ಪಾಲಾಗುತ್ತದೆ, ಹಣ ಒಡವೆಗಳೆಲ್ಲ ಪೋಲೀಸರ ಪಾಲಾಗುತ್ತದೆ. ಗೌರವ ಮತ್ತು ಪ್ರತಿಷ್ಠೆಗಳು ಮಣ್ಣು ಪಾಲಾಗುತ್ತವೆ. ಇತ್ತ ಬಾಷಾನಿಗೂ ಅದರ ಬಿಸಿ ತಟ್ಟುತ್ತದೆ. ಅವನು ಜೈಲು ಪಾಲಾದರೆ ಅವನ ಸಂಸಾರದಲ್ಲಿ ಅಲ್ಲೋಲ ಕಲ್ಲೋಲಗಳು ಸೃಷ್ಠಿಯಾಗುತ್ತವೆ. ಸಂಘರ್ಷವು ಒಳ್ಳೆಯವರು ಕೆಟ್ಟವರು ಎಂಬುದನ್ನು ನೋಡದೆ ತನ್ನ ಸ್ವರೂಪಕ್ಕನುಗುಣವಾಗಿ ವಿನಾಶದ ಕಡೆಗೆ ಸಾಗುತ್ತದೆ.

**ಮೌನ**

ಮೌನವು ಪ್ರತಿಭಟನೆಯ ಒಂದು ಸಮರ್ಥ ವಿಧಾನವಾಗಿದೆ. ಮಾತಿಗೆ ಒಂದು ಅರ್ಥವಿದ್ದರೆ ಮೌನಕ್ಕೆ ನಾನಾ ಅರ್ಥಗಳಿರುತ್ತವೆ. ಮಾತಿನಿಂದ ಹೇಳಲಾಗದ್ದನ್ನು ಮೌನದಿಂದ ಹೇಳಬಹುದಾಗಿರುತ್ತದೆ.

ಮಾತು ಬೆಳ್ಳಿ ಮೌನ ಬಂಗಾರ ಎಂಬ ಗಾದೆಯೂ ಸಹ ಮೌನದ ಮಹತ್ವವನ್ನು ಹೇಳುತ್ತದೆ. ಮೌನವು ಜಾಣರ ನುಡಿಯಾಗಿದೆ. ತಿಳುವಳಿಕೆಯುಳ್ಳವರ ಆಯುಧವಾಗಿದೆ. ಹಾಗಾಗಿ ಮೌನ ಪ್ರತಿಭಟನೆಗೆ ತನ್ನದೇ ಆದ ಪ್ರಾಮುಖ್ಯತೆ ಇದೆ. ಪ್ರತಿಭಟನೆಯ ಬೇರೆಲ್ಲಾ ಮಾರ್ಗಗಳಿಗಿಂತ ಮೌನ ಪ್ರತಿಭಟನೆಯು ಸಾತ್ವಿಕವಾದುದು ಮತ್ತು ಅಷ್ಟೇ ಪ್ರಭಲವಾದುದು. ಕಾನೂನಿನ ಉಲ್ಲಂಘನೆಯಾಗಲೀ, ಯಾವುದೇ ಆಸ್ತಿ ಹಾನಿಯಾಗಲೀ ಇರುವುದಿಲ್ಲ.

ಅನ್ಯಾಯ, ದೌರ್ಜನ್ಯಗಳು ನಡೆಯುವಾಗ ಮಾತನಾಡದಂತೆ ಇರುವುದು ಮೌನ ಪ್ರತಿಭಟನೆಯಲ್ಲ. ಅನ್ಯಾಯ ದೌರ್ಜನ್ಯ ನಡೆಸುವವರಿಗೆ ಯಾವುದೇ ಪ್ರೋತ್ಸಾಹ ನೀಡದಂತೆ, ಅವರ ಕೃತ್ಯಗಳನ್ನು ಸಮರ್ಥಿಸದಂತೆ ಇರುವುದು ಒಂದು ವಿಧವಾದರೆ, ದೌರ್ಜನ್ಯ ಎಸಗುವವರ ಮುಂದೆ ಮೌನವಾಗಿ ಕೂರುವುದು ಮತ್ತೊಂದು ವಿಧವಾಗಿದೆ. ಜಮೀನ್ದಾರರ ವರ್ತನೆಗಳಿಗೆ ಶ್ರಮಿಕರ ಮೌನ, ಕೌಟುಂಬಿಕ ದೌರ್ಜನ್ಯಕ್ಕೆ ಹೆಣ್ಣಿನ ಮೌನ, ಸಂಪ್ರದಾಯ ಶರಣರ ಆರ್ಭಟಕ್ಕೆ ವೈಚಾರಿಕರ ಮೌನ, ರಾಜಕೀಯ ಕೆಸರೆರಚಾಟಕ್ಕೆ ಪ್ರಜೆಗಳ ಮೌನ ಹೀಗೆ ಮೌನದ ಮೂಲಕವಾಗಿಯೇ ಎದುರಾಳಿಯ ಉತ್ಸಾಹ ಮತ್ತು ಶಕ್ತಿಯನ್ನು ಕುಂದಿಸುವ ಸಾಮರ್ಥ್ಯ ಮೌನಕ್ಕಿದೆ.

ಒಡೆಯನು ಹೇಳಿದ ಕೆಲಸವನ್ನು ಮಾಡದ ಶ್ರಮಿಕನದೂ ಮೌನ ಪ್ರತಿಭಟನೆಯಾಗುತ್ತದೆ. ಚೋಮನ ದುಡಿಯಲ್ಲಿ ಒಡೆಯ ಸಂಕಪ್ಪಯ್ಯನಿಂದ ಭೂಮಿಯನ್ನು ಗೇಣೀಗೆ ಪಡೆಯಲಾಗದ ಚೋಮ ನಿರಾಸೆ ಅನುಭವಿಸುತ್ತಾನೆ. ತನ್ನ ಭೂಮಿಯನ್ನು ಉಳುಮೆ ಮಾಡಲಾಗದ ಮೇಲೆ ಧಣಿಯರ ಭೂಮಿಯನ್ನೂ ಉಳಲಾಗದೆಂದು ತೀರ್ಮಾನಿಸುತ್ತಾನೆ. ಆದರೆ ಅದನ್ನು ನೇರವಾಗಿ ಹೇಳದೆ ಹಸುಗಳನ್ನು ಕಾಡಿಗೆ ಓಡಿಸುವುದು, ಒಡೆಯರುಕರೆ ಕಳುಹಿಸಿದರೂ ಚೋಮ ಹೋಗದಿರುವುದು ಅವನ ಮೌನ ಪ್ರತಿಭಟನೆಯೇ ಆಗಿದೆ.

ಮೌನ ಪ್ರತಿಭಟನೆಯು ಸಾಮಾನ್ಯವಾಗಿ ದುರ್ಬಲರ ಅಸ್ತ್ರವಾಗಿರುತ್ತದೆ. ಪ್ರಬಲ ಮೇಲ್ವರ್ಗದವರನ್ನೋ, ಜಮೀನ್ದಾರರನ್ನೋ ಎದುರಿಸಲು ದೈಹಿಕವಾಗಿ ಮತ್ತು ಆರ್ಥಿಕವಾಗಿ ಶಕ್ತಿಯಿಲ್ಲದವರು ಈ ವಿಧದ ಪ್ರತಿಭಟನೆಯನ್ನು ಪ್ರದರ್ಶಿಸುತ್ತಾರೆ. ಮೌನ ಧರಣಿ, ಮೌನ ಮೆರವಣಿಗೆ ಮುಂತಾದ ಕ್ರಮಗಳ ಮೂಲಕ ತಮ್ಮ ಮೇಲಿನ ಶೋಷಣೆಯನ್ನು ವಿರೋಧಿಸುವುದು ಈ ಪ್ರತಿಭಟನೆಯ ಧ್ಯೇಯವಾಗಿದೆ.

ಬರಗೂರು ರಾಮಚಂದ್ರಪ್ಪನವರ ಸೂರ್ಯ ಕಾದಂಬರಿಯ ಕರಿಯನು ಮೌನ ಪ್ರತಿಭಟನೆಯ ಮೂಲಕತನ್ನ ನೋವು ಮತ್ತು ಶೋಷಣೆಯನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತಾನೆ. ಒಡೆಯನ ಹೆಂಡತಿ ಸೀತಕ್ಕಳ ಅನುಕಂಪಕ್ಕೆ ಪಾತ್ರನಾದನೆಂಬ ಕಾರಣಕ್ಕೆ ಒಡೆಯನು ಕರಿಯನ ಹೆಂಡತಿಯನ್ನು ಅತ್ಯಾಚಾರವೆಸಗಿ ಕೊಲ್ಲುತ್ತಾನೆ. ಒಡೆಯನ ಈ ದೌರ್ಜನ್ಯವನ್ನು ಕಂಡು ಅಸಹಾಯಕನಾದ ಕರಿಯನು ಮೌನದೊಳಗೆ ಹೂತು ಹೋಗುತ್ತಾನೆ. ಕರಿಯನ ಈ ಮೌನವೇ ಒಡೆಯನಿಗೆ ದಿಗಿಲು ಹುಟ್ಟಿಸುತ್ತದೆ.

"ಜಮೀನ್ದಾರ 'ಲೇ ಕರಿಯ' ಎಂದಾಗ ಆತ ನೋಡಿದ. ನೋಡಿದವನೇ ಕಣ್ಣೀರು ಒರೆಸಿಕೊಂಡು ಎದ್ದು, ತಲೆ ತಗ್ಗಿಸಿಕೊಂಡು ನಿಂತ.

'ಯಾಕೋ ಇಲ್‌ಕುತ್ಕಂಡಿದ್ದೀಯಾ?' ಜಮೀನ್ದಾರ ಕೇಳಿದ. ಕರಿಯ ಮಾತಾಡಲಿಲ್ಲ.

'ಎಲ್ಲ ಮರ್ತು ಸುಮ್ಕೆ ಇರಕಾಗಲ್ವೇನೋ? ಬೇಕಾದ್ರೆ ಇನ್ನೊಂದು ಮದ್ವೆ ಮಾಡುಸ್ತೀನಿ' ಎಂದಾಗ ಕರಿಯ ತಲೆಯೆತ್ತಿದ. ಮಾತಾಡಲಿಲ್ಲ. ಕಣ್ಣಲ್ಲೇ ಕುಕ್ಕಿದ. ಬಿಗಿ ಹಿಡಿದ ನರನಾಡಿಗಳೆಲ್ಲಾ ಕಣ್ಣ ನೋಟವಾಗಿದ್ದವು. ಜಮೀನ್ದಾರನಿಗೆ ಕರಿಯನ ನೋಟ ಎದುರಿಸೋಕಾಗಲಿಲ್ಲ.

ಆ ನೋಟದಲ್ಲಿ ಇರಿಯೋ ಈಟಿಗಳಿದ್ದವು. ಸುಟ್ಟು ಬೂದಿ ಮಾಡೋ ಬೆಂಕಿ ಚೆಂಡುಗಳಿದ್ದವು. ಜಮೀನ್ದಾರ ಥರಥರ ನಡುಗಿದ.

ಕಡೆಗೆ ಕರಿಯನಿಗೆ ಹೇಳಿದ–'ನಡೆದದ್ದನ್ನ ಯಾರ್‌ತಾವ್ಲೂ ಬಾಯ್ ಬಿಡಕೂಡ್ದು; ಹ್ಞಾ' ಕರಿಯ ಹಾಗೇ ಇದ್ದ, ಅದೇ ಮೌನ. ಅದೆ ಕಣ್ಣುಗಳು, ಅದೇ ನೋಟ. ಬೆವರು ಕಿತ್ತುಕೊಂಡ ಜಮೀನ್ದಾರ ಬೆದರುಗಣ್ಣಲ್ಲಿ ಅತ್ತಿತ್ತ ನೋಡ್ತ– 'ಲೇ ತಿಮ್ಮ, ಬಂದೂಕ ತಗಂಡ್ ಬಾರ್ಲ ಇಲ್ಲಿ' ಎಂದು ಕೂಗಿದ."

ಮೌನದ ಶಕ್ತಿಯನ್ನು ಮೇಲಿನ ಸಂದರ್ಭವು ಚನ್ನಾಗಿ ಧ್ವನಿಸುತ್ತದೆ. ಕರಿಯ ಮೌನಿಯಾದಷ್ಟೂ ಜಮೀನ್ದಾರನಿಗೆ ತಾನು ಮಾಡಿದ ಪಾಪ ಪ್ರಜ್ಞೆ ಕಾಡಿ ಅಧೀರವಾಗುತ್ತಾ ಹೋಗುತ್ತಾನೆ. ಒಂದು ವೇಳೆ ಕರಿಯ ಕೋಪದಿಂದ ಮಾತನ್ನಾಡಿದ್ದರೆ ಜಮೀನ್ದಾರನಿಗೆ ಕರಿಯನನ್ನು ಎದುರಿಸುವ ಶಕ್ತಿ ಬರುತ್ತಿತ್ತು. ಆದರೆ ಕರಿಯನ ಮೌನ ನೂರಾರು ಅರ್ಥಗಳನ್ನು ಧ್ವನಿಸಿ ಜಮೀನ್ದಾರನ ಅಂತ ಶಕ್ತಿಯನ್ನು ನಡುಗಿಸಿತು. ತುಂಬು ಗರ್ಭಿಣಿ ಹೆಂಡತಿಯನ್ನು ಕಣ್ಣ ಮುಂದೆಯೇ ಕೊಂದು ತಪ್ಪನ್ನು ತನ್ನ ಮೇಲೆ ಹೊರಿಸಿದ ಜಮೀನ್ದಾರನ ವಿರುದ್ಧ ಆಳು ಕರಿಯ ತೋರಿದ ಅತ್ಯುತ್ತಮ ಪ್ರತಿಭಟನೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. (1993). ಉಕ್ಕಿನ ಕೋಟೆ. ಜೆ. ಕಲ್ಲಯ್ಯ ಅಂಡ್ ಸನ್ಸ್, ಅರಳೇಪೇಟೆ, ಬೆಂಗಳೂರು.
- ಮುನಿವೆಂಕಟಪ್ಪ. ಎ. (2014). ದಲಿತ ಸಾಹಿತ್ಯ ದರ್ಶನ. ಎರಡನೇ ಮುದ್ರಣ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಬರಗೂರು ರಾಮಚಂದ್ರಪ್ಪ. (2016). ಸೂರ್ಯ. ಮೊದಲ ಮುದ್ರಣ. ಅಭಿರುಚಿ ಪ್ರಕಾಶನ, ಮೈಸೂರು.
- ಬರಗೂರು ರಾಮಚಂದ್ರಪ್ಪ. (2016). ಶಬರಿ. ಅಂಕಿತ ಪುಸ್ತಕ, ಬೆಂಗಳೂರು.
- ಸಾರಾ ಅಬೂಬ್ಕರ್. (2019). ಚಂದ್ರಗಿರಿಯ ತೀರದಲ್ಲಿ. 15ನೇ ಮುದ್ರಣ. ಚಂದ್ರಗಿರಿ ಪ್ರಕಾಶನ, ಮಂಗಳೂರು.
- ದೇವಯ್ಯ ಹರವೆ. (2015). ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಪುರುಷೋತ್ತಮ ಬಿಳಿಮಲೆ. (2017). ಬಂಡಾಯ– ದಲಿತ ಚಳುವಳಿ ಮತ್ತು ಸಾಹಿತ್ಯ. ಪರಿಷ್ಕೃತ ಮೊದಲ ಮುದ್ರಣ. ಅಭಿನವ ಪ್ರಕಾಶನ, ಬೆಂಗಳೂರು.